# KNVVS ARTS AND COMMERCE COLLEGE KITTUR

## News articles published in various news papers

ಹೊಸ ದಿಗಂತ

## ಸಮಾಜಕ್ಕೆ ಸಹಾಯ ಮಾಡಿ

**ಚನ್ನಮ್ಮನ ಕಿತ್ತೂರ :** ಸೇವೆಯು ರೋವರ್ ಮತ್ತು ರೇಂಜರ್‌ಗಳ ಮುಖ್ಯಗುರಿ. ಪ್ರತಿಯೊಬ್ಬರು ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ಕಾರ್ಯನಿರ್ವಹಿಸಬೇಕು ಎಂದು ಭಾರತ್ ಸ್ಕೌಟ್ ಮತ್ತು ಗೈಡ್ ಜಿಲ್ಲಾ ಸಂಸ್ಥೆ ಸಹಾಯಕ ರಾಜ್ಯ ಸಂಘಟನಾ ಆಯುಕ್ತ ಡಿ. ಬಿ. ಅತ್ತಾರ ಹೇಳಿದರು.

ಸ್ಥಳೀಯ ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ರೋವರ್ ಮತ್ತು ರೇಂಜರ್ ಘಟಕದ ಮೂರು ದಿನಗಳ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ ಸ್ಕೌಟ್ ಮತ್ತು ಗೈಡ್ ಇಂದು ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಘಟಕಗಳನ್ನು ಹೊಂದಿದ್ದು ವಿದ್ಯಾರ್ಥಿಗಳಲ್ಲಿ ಸೇವಾಭಾವನೆಯನ್ನು ಬೆಳೆಸುವಲ್ಲಿ ನಿರತವಾಗಿದೆ. ಸಂವಿಧಾನದಲ್ಲಿ ತಿಳಿಸಿರುವ ಕರ್ತವ್ಯಗಳನ್ನು ನಾವೆಲ್ಲರೂ ಪಾಲಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ನಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಸಮಾಜಕ್ಕೆ ಸಹಾಯವನ್ನು ಮಾಡಬೇಕು ಎಂದರು.

ಕಿತ್ತೂರ ನಾಡ ವಿದ್ಯಾವರ್ಧಕ ಸಂಘದ ಚೇರಮನ್ ಜಗದೀಶ ವಸ್ತ್ರದ ಮಾತನಾಡಿ ಮಹಾವಿದ್ಯಾಲಯದಲ್ಲಿರುವ ಎಲ್ಲ ಘಟಕಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ಇಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಾಚಾರ್ಯ ಡಾ. ಜಿ.ಕೆ.ಭೂಮನಗೌಡರ ಮಾತನಾಡಿ ಶಿಬಿರಗಳಲ್ಲಿ ಭಾಗವಹಿಸುವುದು ಒಂದು ಮಹತ್ವದ ಅನುಭವವಾಗಿದೆ. ಈ ರೀತಿ ಶಿಬಿರಗಳಿಂದ ಸಾಮಾಜೀಕರಣ ಉಂಟಾಗುತ್ತದೆ ಎಂದರು.

ನಿರ್ದೇಶಕ ಎಸ್. ಎಸ್. ವಕೇಸಂಗ ಜಿಲ್ಲಾ ಸ್ಕೌಟ್ ಅಧಿಕಾರಿ ವಿಠಲ್ ಎಸ್ ಬಿ, ಕಾಲೇಜಿನ ಸ್ಕೌಟ್ ಅಧಿಕಾರಿಗಳಾದ ಪಿ ಎಲ್ ದಾಮೋಣೆ, ಎ ಕೆ ಕರೆಪ್ಪನವರ, ಸೇರಿದಂತೆ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ವಿಶ್ವವಾಣಿ

## ಸಮಾನತೆಯ ಹರಿಕಾರ ಅಂಬೇಡ್ಕರ್

**ಚನ್ನಮ್ಮನ ಕಿತ್ತೂರ:** ಸಮಾನತೆಯ ಹರಿಕಾರ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ನಮ್ಮ ಭಾರತ ದೇಶದ ಅಖಂಡತೆಯನ್ನು ಎತ್ತಿಹಿಡಿಯುವ ಮಾದರಿಯ ಸಂವಿಧಾನ ರಚನೆ ಮಾಡಿದವರು ಎಂದು ಪ್ರಾಚಾರ್ಯ ಡಾ. ಜಿ.ಕೆ ಭೂಮನಗೌಡರ ಹೇಳಿದರು. ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದರು. ದಲಿತ ದಮನಿತರ, ಶೋಷಿತರ ಮಹಿಳೆಯರ, ಕಾರ್ಮಿಕರ ಧ್ವನಿಯಾಗಿ ನಿಂತು ವಿಶ್ವಕ್ಕೆ ಮಾದರಿಯಾದರು ಎಂದು ಹೇಳಿದರು. ಪ್ರೊ. ಡಾ.ಕೆ.ಆರ್.ಮೆಳವಂಕಿ, ಆರ್ ಬಿ ಹವಿನಾಳೆ, ಡಾ. ಬಿ ಜಿ ನಂದನ, ಜಿ ಎಸ್ ಪ್ರಭಯ್ಯನವರಮಠ, ಎಮ್ ಜಿ ಹಿರೇಮಠ, ಪ್ರಿಯಾಂಕಾ ಧಾಮೋಣೆ, ಎ ಕೆ ಕರೆಪ್ಪನವರ, ರೇಖಾ ಗಾಣ ಗೇರ, ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹೊಸ ದಿಗಂತ

## ಕನಕದಾಸರ ಜಯಂತಿ ಆಚರಣೆ

**ಚನ್ನಮ್ಮನ ಕಿತ್ತೂರ:** ಭಕ್ತ ಕವಿ ದಾಸ ಶ್ರೇಷ್ಠ ಕನಕದಾಸರು ಸಮಾಜದ ಓರೆ ಕೋರೆಗಳನ್ನು ತಿದ್ದುವಲ್ಲಿ ಅತ್ಯಂತ ಕ್ರಿಯಾಶೀಲರಾಗಿದ್ದರೆಂದು ಪ್ರಾಚಾರ್ಯ ಎಚ್. ಕೆ. ನಾಗರಾಜ್ ಹೇಳಿದರು.

ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ ಕನಕದಾಸರ ವ್ಯಕ್ತಿತ್ವದ ಕುರಿತು ಮಾತನಾಡಿದರು. ಪದವಿ ಪೂರ್ವ ಪ್ರಾಚಾರ್ಯರಾದ ಪ್ರೊ. ಎಮ್. ಎಸ್. ಪಾಟೀಲ ಡಾ. ಕೆ ಆರ್ ಮೆಳವಂಕಿ ಮಾತನಾಡಿದರು. ಪ್ರೊ. ಎಂ. ಜಿ. ಹಿರೇಮಠ, ಪ್ರೊ. ಸತೀಶ್ ಶಹಾಪೂರಮಠ ಪ್ರೊ. ಆನಂದ ಕರಪ್ಪನವರ, ಡಾ. ಎಸ್ ಬಿ ತೋಲಗಿ, ಪ್ರೊ. ಪ್ರಿಯಾಂಕ ಧಮೋಣೆ ಪ್ರೊ. ಪಿ. ಸಿ. ಶಿವನಪ್ಪನವರ ಹಾಗೂ ಇತರ ಪ್ರಾಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.



## ಕ್ಯಾನ್ಸರ್ ತಡೆಗೆ ರಕ್ತದಾನ ಸಹಕಾರಿ

**ಚನ್ನಮ್ಮನ ಕಿತ್ತೂರ:** ರಕ್ತದಾನ ಮಾಡುವುದರಿಂದ ಕ್ಯಾನ್ಸರ್ ನಂತಹ ರೋಗಗಳ ಬರುವಿಕೆಯನ್ನು ತಡೆಗಟ್ಟಬಹುದು ಎಂದು ಪ್ರಾಚಾರ್ಯ ಡಾ. ಜಿ.ಕೆ. ಭೂಮನಗೌಡರ ಹೇಳಿದರು.

ಸ್ಥಳೀಯ ಕಿ.ನಾ.ವಿ.ವ. ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ವಿಶ್ವ ರಕ್ತದಾನ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಪಘಾತ ಆದಂತಹ ಸಂದರ್ಭದಲ್ಲಿ ರಕ್ತದಾನ ಮಾಡುವುದರಿಂದ ಎಷ್ಟೋ ಜನರ ಜೀವಗಳನ್ನು ಉಳಿಸಬಹುದಾಗಿದೆ. ಮತ್ತು ನಮ್ಮ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬಹುದು. ಪ್ರಸ್ತುತ ದಿನಗಳಲ್ಲಿ ರಕ್ತದ ಅವಶ್ಯಕತೆ ಬಹಳಷ್ಟಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ರಕ್ತ ದಾನಕ್ಕೆ ಮುಂದಾಗಬೇಕಾಗಿದೆ. ಸಂಘ ಸಂಸ್ಥೆಗಳು ಶಿಬಿರಗಳನ್ನು ಏರ್ಪಡಿಸುವ ಮೂಲಕ ರಕ್ತದ ಕೊರತೆ ನೀಗಿಸಲು ಮುಂದಾಗಬೇಕೆಂದು ಹೇಳಿದರು.

ಪ್ರೊ. ಜಿ.ಎಸ್. ಪ್ರಭಯ್ಯನವರಮಠ, ಡಾ. ಕೆ.ಆರ್. ಮೆಳವಂಕಿ ಮಾತನಾಡಿದರು.



ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ. ಜಿ.ಬಿ. ನಂದನ್ ಸೇರಿದಂತೆ ಇನ್ನಿತರರು ಇದ್ದರು. ಪ್ರಾರ್ಥನೆ ಪ್ರೊ. ನಾಗರಾಜ, ಪ್ರೊ. ಎಸ್.ವಿ. ಹೊನ್ನರಾಜು ನಿರೂಪಿಸಿದರು. ಪ್ರೊ. ಜಿ.ಎಸ್. ಪ್ರಭಯ್ಯನವರಮಠ ಸ್ವಾಗತಿಸಿದರು. ಪ್ರೊ. ಸಂಗೀತಾ ತೋಲಗಿ ವಂದಿಸಿದರು.

Co-Ordinator
IQAC KNVVS'
Arts & Com College,KITTUR

PRINCIPAL
KNVVS's Arts & Commerce College
Kittur-591115, Dt. Belagavi

**ಹೊಸ ದಿಗಂತ**

ಶನಿವಾರ, 24 ಆಗಸ್ಟ್ 2024, ಹುಬ್ಬಳ್ಳಿ

## ಭಾರತ ಬಾಹ್ಯಾಕಾಶದಲ್ಲಿ ಸಾಧನೆ

**ಚನ್ನಮ್ಮನ ಕಿತ್ತೂರ:** ಭಾರತವು ಸಂಭ್ರಮಿಸುವ ದಿನ ಜಗತ್ತಿನಲ್ಲಿಯೇ ಬಾಹ್ಯಾಕಾಶ ತಂತ್ರಜ್ಞಾನದಲ್ಲಿಯೇ ಮಹತ್ವಪೂರ್ಣ ಸಾಧನೆಯನ್ನು ಮಾಡಿರುತ್ತದೆ ಎಂದು ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಿ ಕೆ ಭೂಮನಗೌಡರ ಹೇಳಿದರು. ಸ್ಥಳೀಯ ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಚಂದ್ರಯಾನ-3 ಉಪಗ್ರಹವನ್ನು ಚಂದ್ರನ ಮೇಲೆ ದಕ್ಷಿಣ ಭಾಗದಲ್ಲಿ ಇಳಿಸಿದ ಮೊದಲ ದೇಶವಾಗಿದೆ. ಈಗಿನ ಯುವಕರು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಆಸಕ್ತಿತೋರಿ ನಮ್ಮ ದೇಶದ ವಿಜ್ಞಾನಿಯಾದ ಅಬ್ದುಲ್ ಕಲಾಂ ರಂತೆ ಯುವಕರು ನವೀನ ಸಂಶೋದನೆಗಳನ್ನು ಮಾಡುವುದಾಗಬೇಕೆಂದು ಕರೆ ಕೊಟ್ಟರು. ಕಾರ್ಯಕ್ರಮದಲ್ಲಿ ಕೋಆರ್ಡಿನೇಟಿಂಗ್ ಚೇರಮನರು ಪ್ರೊ. ಎಕೆ ಕರೆಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಕೆ. ಆರ್. ಮೆಳವಂಕಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಡಾ. ಬಿ. ಜಿ ನಂದನ ವಂದಿಸಿದರು, ಪ್ರೊ. ಎಸ್. ವಿ. ಹೊನ್ನರಾಜು ನಿರೂಪಿಸಿದರು.



ಬೆಳಗಾವಿ: ಸ್ಥಳೀಯ ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ಬಾಹ್ಯಾಕಾಶ ದಿನ ಆಚರಣೆ ಮಾಡಲಾಯಿತು.

**ಹೊಸ ದಿಗಂತ**

## ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಅಗತ್ಯ



## ಡಾ.ಅಂಬೇಡ್ಕರ್ ಮಹಾಪರಿನಿರ್ವಾಣ ದಿನಾಚರಣೆ



ಚನ್ನಮ್ಮನ ಕಿತ್ತೂರು,ಡಿ.7: ಇಲ್ಲಿನ ವಿದ್ಯಾವರ್ಧಕ ಸಂಘದ ಕಲಾ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಡಾ. ಬಿ. ಆರ್. ಅಂಬೇಡ್ಕರ್ ಅವರ 68 ನೇ ವರ್ಷದ ಮಹಾ ಪರಿನಿರ್ವಾಣ ದಿನಾಚರಣೆಯನ್ನು ಆಚರಿಸಲಾಯಿತು.

ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿ ಪ್ರೊ. ಹೊನ್ನರಾಜು ಎಸ್. ವಿ ಅವರು ಪರಿನಿರ್ವಾಣ ದಿನದ ಆಚರಣೆಯ ಮಹತ್ವ ಹಾಗೂ ಅಂಬೇಡ್ಕರ್ ಜೀವನವನ್ನು ಕುರಿತು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಪ್ರೊ. ಎಚ್. ಕೆ. ನಾಗರಾಜ ಅವರು ಅಂಬೇಡ್ಕರ್ ವಿಚಾರಧಾರೆ ಮತ್ತು ಬೌದ್ಧ ಧರ್ಮದ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ ಸಂಯೋಜಕ ಪ್ರೊ. ರವಿ ಹವಲಣ್ಣವರ, ಡಾ. ಬಿ. ಜೆ. ನಂದನ, ಡಾ. ಕೆ. ಆರ್. ಮೆಳವಂಕಿ, ಪ್ರೊ. ಪ್ರಕಾಶ್ ಹೊನ್ನಪ್ಪನವರ, ಪ್ರೊ. ಸತೀಶ್ ಕಹಾಪೂರ ಮಠ ಪ್ರೊ. ಆನಂದ ಕರೆಪ್ಪನವರ ಡಾ. ಸಂಗೀತ ಕೋಲಗಿ ಪ್ರೊ. ಪ್ರಿಯಾಂಕ ಧಾರೋಣಿ, ವರುಣ ಕುಪ್ಪಸಗೌಡರ, ದೀಪಾ ಗಾಣಿಗೇರ, ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ರಕ್ತದಾನ ಶ್ರೇಷ್ಠ ದಾನ: ಭೂಮನಗೌಡರ

ಚನ್ನಮ್ಮನ ಕಿತ್ತೂರು: 'ರಕ್ತದಾನ ಶ್ರೇಷ್ಠ ದಾನವಾಗಿದೆ. ಅಪಘಾತದ ಸಮಯದಲ್ಲಿ ನಾವು ನೀಡಿದ ರಕ್ತ ಒಂದು ಜೀವ ಉಳಿಸಬಲ್ಲದು' ಎಂದು ಪ್ರಾಚಾರ್ಯ ಡಾ. ಜಿ. ಕೆ. ಭೂಮನಗೌಡರ ಹೇಳಿದರು.

ಇಲ್ಲಿನ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ರಕ್ತದಾನ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ.ಬಿ. ಜೆ.ನಂದನ್, ಡಾ. ಕೆ.ಆರ್.ಮೆಳವಂಕಿ ಮಾತನಾಡಿದರು. ಪ್ರೊ. ನಾಗರಾಜ ಪ್ರಾರ್ಥಿಸಿದರು. ಪ್ರೊ.ಜಿ.ಎಸ್. ಪ್ರಭಯ್ಯನವರಮಠ ಸ್ವಾಗತಿಸಿದರು. ಪ್ರೊ. ಎಸ್.ವಿ.ಹೊನ್ನರಾಜು ನಿರೂಪಿಸಿದರು. ಸಂಗೀತಾ ಕೋಲಗಿ ವಂದಿಸಿದರು.

**ಭಾರತ ವೈಭವ** — Read, Discuss & Debate With Editor Dr. N Prashant Rao — ಕನ್ನಡ ದಿನಪತ್ರಿಕೆ — Bharat Vaibhav Daily — POWERED BY. KHUSHI HOST

## ನೈತಿಕ ಸಾಮಾಜಿಕ ಚಾರಿತ್ರ್ಯ ನಿರ್ಮಾಣ ಮಾಡುವುದು ಶಿಕ್ಷಣ: ಡಾ. ಕುಂದಗೋಳ

**ಚನ್ನಮ್ಮನ ಕಿತ್ತೂರು:** ಶಿಕ್ಷಣ ಎಂದರೆ ಅದು ನಮ್ಮಲ್ಲಿ ನೈತಿಕ, ಸಾಮಾಜಿಕ ಚಾರಿತ್ರ್ಯ ನಿರ್ಮಾಣ ಮಾಡುವುದು ಶಿಕ್ಷಣ, ಶಿಕ್ಷಣ ನಮ್ಮಲ್ಲಿ ಜೀವನ ಮೌಲ್ಯಗಳನ್ನು ರೂಪಿಸುವುದು ಶಿಕ್ಷಣವಾಗಿದೆ ಎಂದು ಕವಿವಿ ಧಾರವಾಡದ ಶ್ರೀ ಬಸವೇಶ್ವರ ಪೀಠದ ಸಂಯೋಜಕರಾದ ಡಾ. ಚಂದ್ರಶೇಖರ ಎಮ್. ಕುಂದಗೋಳ ಹೇಳಿದರು.



# ಸೈನಿಕರಿಗೆ ನಾವು ಋಣಿಗಳು

**ಚನ್ನಮ್ಮನ ಕಿತ್ತೂರ:** ದೇಶ ಸೇವೆಯಲ್ಲಿ, ಸಿಯಾಚಿನ್ ಪ್ರದೇಶದಲ್ಲಿ 1999ರಲ್ಲಿ ನಡೆದ ಯುದ್ಧದಲ್ಲಿ ಮಡಿದ ವೀರಯೋಧರ ಅವರ ಕುಟುಂಬಸ್ಥರ ತ್ಯಾಗ ಬಲಿದಾನ ಎಂದೆಂದಿಗೂ ಅವಿಸ್ಮರಣೀಯ ಎಂದು ಕಿನಾವಿವ ಸಂಘದ ಪದವಿ ಕಾಲೇಜು ಪ್ರಾಚಾರ್ಯ ಡಾ.ಜಿ.ಕೆ. ಭೂಮನಗೌಡರ ಹೇಳಿದರು.

ಸ್ಥಳೀಯ ಕಿನಾವಿವ ಸಂಘದ ಕಾಲೇಜಿನಲ್ಲಿ, 24ನೇ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ವೀರಯೋಧರ ಪರಿಶ್ರಮದಿಂದ ನಾವು ಪ್ರತಿದಿನ ಸುಖವಾಗಿ ನಿದ್ರಿಸಲು ಸಾಧ್ಯವಾಗಿದೆ, ಎಂತಹ ದುರ್ಗಮ ಪ್ರದೇಶದಲ್ಲಿ ದೇಶ ಸೇವೆಗಾಗಿ ಯಾವುದೇ ಅಂಜಿಕೆಯಿಲ್ಲದೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾರೆ, ತಮ್ಮ ಕುಟುಂಬದ ಚಿಂತೆಯನ್ನು ಬಿಟ್ಟು ನಮಗಾಗಿ ತಮ್ಮ ಪ್ರಾಣವನ್ನು ಒತ್ತೆಯಿಟ್ಟು ಕರ್ತವ್ಯ ನಿರ್ವಹಿಸುವ ದೇಶದ ಸೈನಿಕರೆ ನಮಗೆಲ್ಲ ಪ್ರಾತಃಸ್ಮರಣೀಯರು ಎಂದರು.

ಪ್ರೊ.ಜಿ.ಎಸ್. ಪ್ರಭಯ್ಯನವರಮಠ, ಪ್ರೊ.ಎಂ.ಜಿ. ಹಿರೇಮಠ ಮಾತನಾಡಿ, ದೇಶ ಕಾಯುವ ಸೈನಿಕರಿಗೆ ನಾವು ಗೌರವ ಕೊಡಬೇಕು. ಕಾರ್ಗಿಲ್ ಯುದ್ಧದಲ್ಲಿ ನಮ್ಮ ಸೈನಿಕರು ತೋರಿದ ದಿಟ್ಟತನ ಹಾಗೂ ಹೋರಾಟವನ್ನು ನೋಡಿ ಇಡಿ ಜಗತ್ತು ನಮ್ಮ ಸೈನಿಕರ ಶಕ್ತಿಯನ್ನು ನೋಡಿ ಬೆಚ್ಚಿದೆ ಎಂದರು.

ಪ್ರಾಸ್ತಾವಿಕವಾಗಿ ಡಾ.ಕೆ.ಆರ್.ಮೊಳವಂಶಿ, ಎಸ್.ಎಸ್. ಹೊಸಮನಿ ಮಾತನಾಡಿದರು. ವೀರ ಯೋಧರ ಸ್ಮರಣಾರ್ಥವಾಗಿ ಮೌನವನ್ನು ಆಚರಿಸಿ ಗೌರವ ಸಲ್ಲಿಸಲಾಯಿತು. ಪ್ರೊ.ರವಿ ಹವಿನಾಳ, ಪ್ರೊ.ಸಂಗೀತಾ ಕೋಳಗಿ, ಪ್ರೊ.ಪ್ರಿಯಾಂಕಾ ಧಾಮೋಣೆ, ಡಾ.ಬಿ.ಜಿ.ನಂದನ ಉಪಸ್ಥಿತರಿದ್ದರು.

ಪ್ರೊ.ಎಚ್.ಕೆ. ನಾಗರಾಜ ಪ್ರಾರ್ಥಿಸಿದರು, ಪ್ರೊ.ಆನಂದ ಕರೆಪ್ಪನವರ ಸ್ವಾಗತಿಸಿದರು, ಪ್ರೊ.ಸತೀಶ ಕಡಾಪೂರ ನಿರೂಪಿಸಿದರು, ದೀಪಾ ಗಾಣಿಗೇರ ವಂದಿಸಿದರು.



# ದೇಶ ಕಾಯುವ ಸೈನಿಕರಿಗೆ ಋಣಿ: ಡಾ.ಭೂಮನಗೌಡರ



# ವಿಜಯವಾಣಿ ನಂ.1

ಕನ್ನಡ ದಿನ ಪತ್ರಿಕೆ

ಡಾ.ಸ್ಫೂರ್ತಿ ಮಾಸ್ತಿಹೊಳಿ ಅಭಿಮತ | ವಾರ್ಷಿಕ ಸ್ನೇಹ ಸಮ್ಮೇಳನ

## ನಿಯಮಿತ ಆಹಾರ ಸೇವನೆ ಮುಖ್ಯ

■ ವಿಜಯವಾಣಿ ಸುದ್ದಿಜಾಲ ಚನ್ನಮ್ಮನ ಕಿತ್ತೂರು

ಜೀವನದಲ್ಲಿ ಯಶಸ್ಸು ಕಾಣಲು ನಿಯಮಿತ ಆಹಾರ ಸೇವನೆ ಮತ್ತು ಮನಸ್ಸು ವಿನೋದದಿಂದ ಕೂಡಿರುವುದು ಬಹುಮುಖ್ಯ ಎಂದು ಶಿವೋಹಂ ಸ್ಪಿರಿಚುವಲ್ ಹಬ್ ಸಿಇಒ ಡಾ.ಸ್ಫೂರ್ತಿ ಮಾಸ್ತಿಹೊಳಿ ಹೇಳಿದರು.

ಸ್ಥಳೀಯ ಕಿ.ನಾ.ವಿ.ವ.ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ 49ನೇ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ವಿದ್ಯಾರ್ಥಿಗಳು ನಿಯಮಿತವಾಗಿ ಸರಿಯಾದ ಸಮಯಕ್ಕೆ ಆರೋಗ್ಯಕರ ಆಹಾರ ಸೇವಿಸಬೇಕು. ದೈಹಿಕ ಬೆಳವಣಿಗೆ ಜತೆಗೆ ಮಾನಸಿಕ ಬೆಳವಣಿಗೆ ಅವಶ್ಯ ಎಂದರು.

ಕಿ.ನಾ.ವಿ.ವ.ಸಂಘದ ಚೇರ್ಮನ್ ಜಗದೀಶ ವಸ್ತದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರೊ.ಶ್ರೀಧರ ಶಾಸ್ತ್ರಿ, ಪ್ರೊ. ನಾಗನಗೌಡ ಬೈಲೂರ, ಪ್ರೊ.ಎಂ.ಎಸ್.ಪಾಟೀಲ ಅವರನ್ನು ಸನ್ಮಾನಿಸಲಾಯಿತು. ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಿನಾವಿವ ಸಂಘದ ಉಪಾಧ್ಯಕ್ಷ ಅರುಣಕುಮಾರ ಬಿಕ್ಕಣ್ಣವರ, ಆಡಳಿತ ಮಂಡಳಿ ನಿರ್ದೇಶಕರಾದ ಎಸ್.ವಿ.ತಡಕೋಡ, ಎಸ್.ಎಸ್.ವಳಸಂಗ, ಯು.ಡಿ.ಭಾರತಿ, ಜೆ.ಬಿ.ಘಟ್ಟಟ್ಟಿ, ಎಸ್.ಎಸ್.ರೇವಮಠ, ಡಿ.ಎಲ್.ಪಾಟೀಲ, ವಿ.ಆರ್.ಪಾಟೀಲ, ವಿದ್ಯಾರ್ಥಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅಕ್ಷತಾ ಮಾಟೊಳ್ಳಿ, ವಿದ್ಯಾರ್ಥಿನಿ ಪ್ರತಿನಿಧಿ ಕೇಟಿಜ್ವಿನಿ ಮೆಟ್ಟೀನ, ಕ್ರೀಡಾ ಕಾರ್ಯದರ್ಶಿ ವೈಷ್ಣವಿ ದೇಗಾಂವಿ, ವಿದ್ಯಾರ್ಥಿ ಒಕ್ಕೂಟದ ಸಹ-ಕಾರ್ಯದರ್ಶಿ ಡಾ. ಸಂಗೀತಾ ಕೋಳಗಿ ಇದ್ದರು. ಪ್ರಾಚಾರ್ಯ ಡಾ.ಜಿ.ಕೆ.ಭೂಮನಗೌಡರ ಸ್ವಾಗತಿಸಿದರು. ಪ್ರೊ.ಎಚ್.ಕೆ.ನಾಗರಾಜ ವಂದಿಸಿದರು. ಪ್ರೊ. ಸಿ.ಎಂ. ಗರಗದ ನಿರೂಪಿಸಿದರು.



ಚನ್ನಮ್ಮನ ಕಿತ್ತೂರಿನ ಕಿ.ನಾ.ವಿ.ವ.ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ.ಸ್ಫೂರ್ತಿ ಮಾಸ್ತಿಹೊಳಿ ಮಾತನಾಡಿದರು. ಜಗದೀಶ ವಸ್ತದ, ಎಸ್.ವಿ.ತಡಕೋಡ, ಎಸ್.ಎಸ್.ವಳಸಂಗ, ಯು.ಡಿ.ಭಾರತಿ, ಜೆ.ಬಿ.ಘಟ್ಟಟ್ಟಿ, ಡಾ.ಜಿ.ಕೆ.ಭೂಮನಗೌಡರ ಇತರರು ಇದ್ದರು.

ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಿತ್ತೂರಿನ ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕದ ವತಿಯಿಂದ ಆಯೋಜಿಸಿದ್ದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸೇನಾಧಿಕಾರಿ ಪರವೇಜ ಹವಾಲ್ದಾರ ಮಾತನಾಡಿದರು.

## ಕಾರ್ಗಿಲ್ ವಿಜಯೋತ್ಸವ ನಮಗೆ ಪ್ರೇರಣೆ

ಚನ್ನಮ್ಮನ ಕಿತ್ತೂರು: ಕಾರ್ಗಿಲ್ ವಿಜಯೋತ್ಸವ ಆಚರಿಸುವುದರಿಂದ ಹುತಾತ್ಮ ಯೋಧರಿಗೆ ನಮನ ಸಲ್ಲಿಸುವುದರೊಂದಿಗೆ ನಮಗೆಲ್ಲ ದೇಶ ಸೇವೆ ಮಾಡಲು ಪ್ರೇರಣೆ ನೀಡಲಿದೆ ಎಂದು ಮಾಜಿ ಸೇನಾಧಿಕಾರಿ ಪರವೇಜ ಹವಾಲ್ದಾರ ಹೇಳಿದರು.

ಕಿತ್ತೂರಿನ ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕದ ವತಿಯಿಂದ ಆಯೋಜಿಸಿದ್ದ ಕಾರ್ಗಿಲ್ ವಿಜಯದ 22ನೇ ವರ್ಷದ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಹೆಚ್ಚು ಹೆಚ್ಚು ಯುವಕರು ಸೇನೆ ಸೇರುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಕಾರ್ಗಿಲ್‌ದಲ್ಲಿ ನಮ್ಮ ವೀರಯೋಧರು ಹೋರಾಡಿದ ರೀತಿ ಅವಿಸ್ಮರಣೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಜಿ.ಕೆ. ಭೂಮನಗೌಡರ, ಸೈನಿಕರು ನಮ್ಮ ಗಡಿ ರಕ್ಷಣೆ ಮಾಡುತ್ತಿರುವುದರಿಂದ ನಾವು ಇಂದು ಸುಖವಾಗಿ ಜೀವನ ನಡೆಸಲು ಸಾಧ್ಯವಾಗಿದೆ. ಕಾರ್ಗಿಲ್ ವಿಜಯೋತ್ಸವ ಈ ಎಲ್ಲ ಸೈನಿಕರಿಗೆ ನಾವು ಸಲ್ಲಿಸುವ ನಮನಗಳು ಎಂದರು.

ಎನ್‌ಸಿಸಿ ಅಧಿಕಾರಿ ಎಂ.ಜಿ. ಹಿರೇಮಠ ಪ್ರಾಸ್ತಾವಿಕ ಮಾತನಾಡಿದರು, ಎನ್‌ಸಿಸಿ ಕೆಡೆಟ್ ತೇಜಸ್ವಿನಿ ಮೆಟ್ಟೀನ್, ಶ್ರೀಕಾಂತ ಬೇವಿನಕೊಪ್ಪಮಠ ಮಾತನಾಡಿದರು. ಆನಂದ ಕರೆಪ್ಪನವರ ಸ್ವಾಗತಿಸಿದರು. ಸಂಗೀತ ಉಪನ್ಯಾಸಕ ಎಚ್.ಕೆ. ನಾಗರಾಜ ಪ್ರಾರ್ಥನೆ ಮಾಡಿದರು. ಪ್ರಕಾಶ ಹೊನ್ನಪ್ಪನವರ ವಂದಿಸಿದರು.

ಸಂಯುಕ್ತ ಕರ್ನಾಟಕ Wed, epape

Co-Ordinator
IQAC KNVVS'
Arts & Com College,KITTUR

PRINCIPAL
KNVVS's Arts & Commerce College
Kittur-591115, Dt.Belagavi

ವಿಜಯವಾಣಿ ನಂ 1

## ಜಾನಪದ ತಜ್ಞ ಡಾ. ರಾಮು ಮೂಲಗಿ ಆಶಯ | ಗ್ರಾಮ ಸಂಭ್ರಮ

# ಯುವಕರು ಜಾನಪದ ಕಲೆ ಅರಿಯಲಿ

■ ವಿಜಯವಾಣಿ ಸುದ್ದಿಜಾಲ ಚನ್ನಮ್ಮನ ಕಿತ್ತೂರು

ಯುವಪೀಳಿಗೆಗೆ ನಮ್ಮ ಸಂಸ್ಕೃತಿಯ ಸೊಬಗು ಹಾಗೂ ಹಬ್ಬ-ಹರಿದಿನಗಳ ಮಹತ್ವವನ್ನು ತಿಳಿಸಲು ಶೈಕ್ಷಣಿಕ ಸಂಸ್ಥೆಗಳಲ್ಲಿ ಹಬ್ಬಗಳನ್ನು ಆಚರಿಸಿ ಜಾನಪದ ಕಲೆ ತಿಳಿಯಪಡಿಸಬೇಕು ಎಂದು ಜಾನಪದ ತಜ್ಞ ಡಾ. ರಾಮು ಮೂಲಗಿ ಹೇಳಿದರು.

ಸ್ಥಳೀಯ ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ, ಮಹಿಳಾ ವೇದಿಕೆ, ಪರಂಪರೆ ಕೂಟ ಹಾಗೂ ವಿದ್ಯಾರ್ಥಿ ಒಕ್ಕೂಟದ ಸಂಯುಕ್ತಾಶ್ರದಲ್ಲಿ ಸಂಕ್ರಾಂತಿ ಪ್ರಯುಕ್ತ ಗುರುವಾರ ಆಯೋಜಿಸಲಾಗಿದ್ದ ಗ್ರಾಮ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯಾಂತ್ರಿಕ ಯುಗದಲ್ಲಿ ನಮ್ಮ ಸಂಸ್ಕೃತಿ ಮರೆಯುತ್ತಿದ್ದೇವೆ. ಕೇವಲ ಯಂತ್ರಗಳಿಗೆ ಮಾರುಹೋಗಿ ನಾವು ನಮ್ಮ ಮನೆಯಲ್ಲಿಯೇ ಅಪರಿಚಿತರಾಗುತ್ತಿದ್ದೇವೆ. ಆ ವಾತಾವರಣದಿಂದ ಮುಕ್ತವಾಗಿ ಎಲ್ಲರೂ ಬೆರೆಯಬೇಕಿದೆ ಎಂದರು. ಜಿಪಂ ಮಾಜಿ ಸದಸ್ಯೆ ರೋಹಿಣಿ ಪಾಟೀಲ, ಕಿತ್ತೂರು ರಾಣಿ ಚನ್ನಮ್ಮ, ಬೆಳವಡಿ ಮಲ್ಲಮ್ಮ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದು ಅವರ ಜೀವನಗಾಥೆ ನಮಗೆ ದಾರಿದೀಪವಾಗಿದೆ ಎಂದರು.



ಚನ್ನಮ್ಮನ ಕಿತ್ತೂರು ಪಟ್ಟಣದಲ್ಲಿ ಸಂಕ್ರಾಂತಿ ಪ್ರಯುಕ್ತ ಎಲ್ಲರೂ ಸಾಂಪ್ರದಾಯಿಕ ಉಡುಗೆಯಲ್ಲಿ ಸಂಭ್ರಮಿಸಿದರು. ರೋಹಿಣಿ ಪಾಟೀಲ, ಡಾ. ರಾಮು ಮೂಲಗಿ, ಜಗದೀಶ ವಸ್ತದ, ಜೆ.ಎಸ್. ಬಿಕ್ಕಣ್ಣವರ, ಡಾ.ಜಿ.ಕೆ.ಭೂಮನಗೌಡರ, ಎಂ.ಎಸ್. ಪಾಟೀಲ ಇತರರು ಇದ್ದರು.

ಕಿನಾವಿವ ಸಂಘದ ಚೇರ್ಮನ್ ಜಗದೀಶ ವಸ್ತದ, ಮಹಿಳಾ ವೇದಿಕೆ ಚೇರ್ಮನ್ ಪ್ರಿಯಂಕಾ ದಾಮೋಣೆ ಮಾತನಾಡಿದರು.

ವಿದ್ಯಾರ್ಥಿಗಳು ಜಾನಪದ ಗೀತೆ ಹಾಗೂ ಸಾಂಸ್ಕೃತಿಕ ನೃತ್ಯಗಳನ್ನು ಪ್ರದರ್ಶಿಸಿದರು. ಸಂಕ್ರಾಂತಿ ಪ್ರಯುಕ್ತ ಎಲ್ಲರೂ ಸಾಂಪ್ರದಾಯಿಕ ಧಿರಿಸು ತೊಟ್ಟಿದ್ದರು. ಕಿನಾವಿವ ಸಂಘದ ಗೌರವ ಕಾರ್ಯದರ್ಶಿ ಜೆ.ಎಸ್.ಬಿಕ್ಕಣ್ಣವರ, ನಿರ್ದೇಶಕ ಎಸ್.ಎಸ್.ವಂಸಂಗ, ಎಸ್.ಎಸ್.ಹಿರೇಮಠ, ಡಿ.ಆರ್.ಪಾಟೀಲ, ವಿ.ಆರ್.ಪಾಟೀಲ, ಜಗದೀಶ ಘಟ್ಟಿಟ್ಟಿ, ಪ್ರಾಚಾರ್ಯ ಎಂ.ಎಸ್.ಪಾಟೀಲ, ಅಕ್ಷತಾ ಮಾಟೊಳ್ಳಿ, ಪ್ರಾಚಾರ್ಯ ಡಾ. ಜಿ.ಕೆ.ಭೂಮನಗೌಡರ ಇತರರಿದ್ದರು.

ವಿಜಯವಾಣಿ ನಂ 1

# ಯುವಜನರು ಕಾನೂನಿನ ಶ್ರೇಷ್ಠತೆ ಅರಿಯಲಿ

» ಅಧ್ಯಕ್ಷ ಜಗದೀಶ ವಸ್ತದ ಆಶಯ

[illegible]





[illegible]

# ಮನುಷ್ಯನ ಬೆಳವಣಿಗೆ ಗ್ರಂಥಾಲಯಗಳಿಂದ ಸಾಧ್ಯ

[illegible]



[illegible]

...ar Industrial Estate, Near Tatwadarsh Hospital, HUBBALLI-580 030. RNI No. 50370/89

Co-Ordinator
IQAC KNVVS'
Arts & Com College,KITTUR

PRINCIPAL
KNVVS's Arts & Commerce College
Kittur-591115, Dt.Belagavi